ಶ್ರೀಮತಿ ಶೋಭಾ ಕರಂದ್ಲಾಜೆ :- ಮಾನ್ಯ ಸಭಾಧ್ಯಕ್ಷರೆ, ಖಂಡಿತವಾಗಿ ಶಾಸಕರ ಅಪೇಕ್ಷೆಯಂತೆ ಹೆಚ್ಚಿನ ಅನುದಾನವನ್ನು ಮುಂದಿನ ಆರ್ಥಿಕ ವರ್ಷದಿಂದ ಕೊಡುವುದಾಗಿ ನಾನು ತಮ್ಮ ಮೂಲಕ ಅವರಿಗೆ ಭರವಸೆಯನ್ನು ಕೊಡುತ್ತಿದ್ದೇನೆ.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ :- ನಾನು ಮುಖ್ಯಮಂತ್ರಿಗಳ ಮುಖಾಂತರ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ, ಇದು ಕುಡಿಯುವ ನೀರಿನ ವಿಚಾರವಾಗಿರುವುದರಿಂದ, ಸಚಿವರು ಮುಖ್ಯಮಂತ್ರಿಗಳ ಮುಖಾಂತರ ಹೆಚ್ಚು ಅನುದಾನವನ್ನು ತೆಗೆದುಕೊಂಡು ಹೆಚ್ಚು ಅನುದಾನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಐ) ವಿಷಯ: <u>ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ.</u>

ಶ್ರೀ ಶ್ರೀಕಾಂತ ಎಸ್.ಕುಲಕರ್ಣಿ (ಜಮಖಂಡಿ) :- ಮಾನ್ಯ ಅಧ್ಯಕ್ಷರೇ, ಕಬ್ಬು ಬೆಳೆಗಾರರ ಸಮಸ್ಯೆಗಳ ಬಗ್ಗೆ ಸನ್ಮಾನ್ಯ ಕೃಷಿ ಮತ್ತು ಮಾರುಕಟ್ಟೆ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಶಿವರಾಜ್ ಎಸ್ ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :- ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ 2006-07ನೇ ಸಾಲಿನಲ್ಲಿ ಒಟ್ಟು 3.57 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಂದಾಜು 357 ಲಕ್ಷ ಮೆಟ್ರಿಕ್ ಟನ್ ಕಬ್ಬು ಬೆಳೆಯಲಾಗಿತ್ತು. ಆ ವರ್ಷ ಒಟ್ಟು 47 ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸಿವೆ. ಆ ವರ್ಷ ಬೆಲ್ಲದ ಬೆಲೆ ಕುಸಿದಿದ್ದರಿಂದಾಗಿ ಬೆಲ್ಲ ತಯಾರಿಕೆಗೆ ಸಾಗಾಣಿಕೆಯಾಗುತ್ತಿದ್ದ 32 ಲಕ್ಷ ಟನ್ ಕಬ್ಬನ್ನು ಕಾರ್ಖಾನೆಗಳೇ ನುರಿಸಬೇಕಾದಂಥ ಪರಿಸ್ಥಿತಿ ಉದ್ಭವವಾಗಿದ್ದು, ಪ್ರಸ್ತುತ ರಾಜ್ಯದಲ್ಲಿ ಬೆಳೆಯಲಾಗಿರುವ ಎಲ್ಲ ಕಬ್ಬನ್ನು ನುರಿಸಬೇಕೆಂದು ಕಾರ್ಖಾನೆಗಳಿಗೆ ಸ್ಪಷ್ಟವಾದ ಸೂಚನೆ ನೀಡಲಾಗಿತ್ತು. 2006-07ನೇ ಸಾಲಿನಲ್ಲಿ ಕಾಕಂಬಿ ಹಾಗೂ ಸಕ್ಕರೆ ಬೆಲೆಯಲ್ಲಿ ಬಹ ತೀವ್ರವಾಗಿ ಕುಸಿತವುಂಟಾಗಿದ್ದು, ಕಾರ್ಖಾನೆಗಳು ನಷ್ಟವನ್ನು ಅನುಭವಿಸಿ, ಕಬ್ಬು ಬೆಳೆದ ರೈತರಿಗೆ ಕಬ್ಬು ಖರೀದಿ ಹಣವನ್ನು ನಿಗದಿತ ಸಮಯದಲ್ಲಿ ಪಾವತಿಸಲು ಸಾಧ್ಯವಾಗಿರುವುದಿಲ್ಲ. ಲಭ್ಯವಿದ್ದ ಪೂರ್ಣ ಪ್ರಮಾಣದ ಕಬ್ಬನ್ನು ನುರಿಸಲು ಕಬ್ಬು ಬೆಳೆಗಾರರು ಹಾಗೂ ಸಕ್ಕರೆ ಉದ್ಯಮದ ಹಿತದೃಷ್ಟಿಯಿಂದ ಈ ಕೆಳಕಂಡ ರಿಯಾಯಿತಿ, ವಿನಾಯಿತಿಗಳನ್ನು ಘೋಷಿಸಲಾಗಿತ್ತು. ದಿನಾಂಕ 16-4-2007ರಿಂದ 31-5-2007ರವರೆಗೆ ವಿವಿಧ ಕಾರ್ಖಾನೆಗಳು ನುರಿಸಿದ

ಕಬ್ಬಿಗೆ ಪ್ರತಿ ಟನ್ನಿಗೆ ನೂರು ರೂಪಾಯಿಯಂತೆ ಸಹಾಯಧನ, ನೆರೆರಾಜ್ಯಗಳಿಗೆ ಸರಬರಾಜ ಕಬ್ಬನ್ನು ಒಳಗೊಂಡಂಥ ಪ್ರತಿ ಟನ್ನಿಗೆ 50 ಕಿ.ಮೀ.ಗಿಂತ ಹೆಚ್ಚಿನ ದೂರಕ್ಕೆ ಸಾಗಾಣಿಕೆ ಮಾಡಿದ ಪ್ರತಿ ಕಿ.ಮೀ.ಗೆ 2 ರೂಪಾಯಿನಂತೆ ಸಹಾಯಧನ, 12 ತಿಂಗಳು ಪೂರೈಸಿದ ಪಕ್ವವಾದ ಹಾಗೂ ಕಟಾವಾಗದೇ ಜಮೀನಿನಲ್ಲಿ ಉಳಿದಿರುವ ಕಬ್ಬಿಗೆ, ರೈತರಿಗೆ ಪ್ರತಿ ಹೆಕ್ಟೇರ್‌ಗೆ 25 ಸಾವಿರ ರೂಪಾಯಿ ಸಹಾಯಧನ ಸೌಲಭ್ಯವನ್ನು ನೀಡಲಾಗಿದ್ದು, ಒಟ್ಟಾರೆ ಈ ಸೌಲಭ್ಯವನ್ನು 10 ಸಾವಿರ ಹೆಕ್ಟೇರ್‌ಗೆ ಸೀಮಿತಗೊಳಿಸಿದೆ. 2006-07ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಹೆಚ್ಚು ಕಬ್ಬು ಬೆಳೆಯಲಾಗಿದ್ದು, 12 ತಿಂಗಳು ಪೂರೈಸಿದ, ಪಕ್ವವಾದ ಹಾಗೂ ಕಟಾವಾಗದೇ ಜಮೀನಿನಲ್ಲಿ ಉಳಿದಂಥ ಕಬ್ಬಿಗೆ ಈಗಾಗಲೇ 15.90 ಕೋಟಿ ರೂಪಾಯಿಗಳಷ್ಟು ಬಿಡುಗಡೆ ಮಾಡಲಾಗಿರುತ್ತದೆ. ಇಂಡಿ ಹಾಗೂ ಸಿಂಧಗಿ ತಾಲ್ಲೂಕಿನಲ್ಲಿ ಕಬ್ಬು ಬೆಳೆಗಾರರಿಗೆ ಪರಿಹಾರ ನೀಡುವ claimಗಳನ್ನು ಬಿಜಾಪುರ ಜಿಲ್ಲಾಧಿಕಾರಿಗಳಿಗೆ ಒದಗಿಸಿರುವ ದಾಖಲೆಯ ಅನುಸಾರವಾಗಿ ಪರಿಶೀಲಿಸಲಾಗಿದ್ದು, ಇದರಲ್ಲಿ ಅನರ್ಹ ಫಲಾನುಭವಿಗಳನ್ನು ಸಹ ಗುರುತಿಸಲಾಗಿರುವ ಕಾರಣ, ಫಲಾನುಭವಿಗಳನ್ನು ಗುರುತಿಸುವಲ್ಲಿ ನಡೆದಿರುವ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಕೃಷಿ ವಿಶ್ವವಿದ್ಯಾಲಯ ಮತ್ತು ಕೃಷಿ ಇಲಾಖೆಯ ನಿವೃತ್ತ ವಿಜ್ಞಾನಿ ಅಧಿಕಾರಿಯವರಿಂದ ಪರಿಶೀಲನೆ ಮಾಡಿಸಲು ಹಾಗೂ 12 ತಿಂಗಳು ಪೂರೈಸಿ ಪಕ್ವವಾದ ಹಾಗೂ ಕಟಾವಾಗದೇ, ಜಮೀನಿನಲ್ಲಿ ಉಳಿದಂಥ ಕಬ್ಬು ಬೆಳೆ ನಷ್ಟ ಹೊಂದಿದಂಥ ರೈತರ ಕಬ್ಬಿನ ಗದ್ದೆಗಳಿಗೆ ಫೋಟೋ ತೆಗೆಯುವ ಸಂಬಂಧ ನಡೆದಿರುವ ಅವ್ಯವಹಾರವನ್ನು ಪರಿಶೀಲನೆ ಮಾಡಲು ಮೂರನೇ ತಂಡದ ನಿವೃತ್ತ ಅಧಿಕಾರಿಗಳನ್ನೊಳಗೊಂಡ ಒಂದು ಪರಿಶೀಲನಾ ಸಮಿತಿಯನ್ನು ರಚನೆ ಮಾಡಲಾಗಿದೆ. ಈ ಸಮಿತಿ ತನ್ನ ವರದಿಯನ್ನು ಈಗಾಗಲೇ ಕೊಟ್ಟಿದೆ. ಅದು ಪರಿಶೀಲನೆಯ ಹಂತದಲ್ಲಿದೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ ಎನ್ನುವುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು :- ಇದಕ್ಕೆ 3-4 ಜನ ಸದಸ್ಯರು ಸಿಗ್ನೇಚರ್ ಮಾಡಿರುವುದರಿಂದ ಎರಡೆರಡು ನಿಮಿಷ ಮಾತ್ರ ಮಾತನಾಡಿ.

ಶ್ರೀ ಶ್ರೀಶಾಂತ ಎಸ್ ಕುಲಕರ್ಣಿ (ಜಮಖಂಡಿ) :- ಸನ್ಮಾನ್ಯ ಅಧ್ಯಕ್ಷರೆ, ಎರಡೇ ನಿಮಿಷ ಮಾತನಾಡುತ್ತೇನೆ. ಉಳಿದ ವಿಷಯಗಳನ್ನು ಬೇರೆ ಶಾಸಕರುಗಳು ಹೇಳುತ್ತಾರೆ. ಬೆಳಗಾವಿ ಭಾಗದಲ್ಲಿ ವಿಶೇಷವಾದಂಥ ಕಬ್ಬು ಬೆಳೆಗಾರರಿದ್ದಾರೆ.

ಬೆಳಗಾವಿ ಕಬ್ಬು ಬೆಳೆಯಲಿಕ್ಕೆ ಬಹಳ ಶ್ರೇಷ್ಠವಾದಂಥ ಭಾಗ. ಹಳೆಯ ಮೈಸೂರಿನ ಕಡೆ 7-8 ರೆಕವರಿ ಬಂದರೆ ಇಲ್ಲಿ 12-13ರವರೆಗೆ ರೆಕವರಿ ಬರತಕ್ಕಂಥ ಉತ್ತಮವಾದಂಥ ವಾತಾವರಣ ಮತ್ತು ಒಳ್ಳೆಯ ಗುಣಮಟ್ಟದ ಜಮೀನು ಇರುವುದರಿಂದ ಇಲ್ಲಿ ಕಬ್ಬು ಬೆಳೆಗಾರರು ಸಾಕಷ್ಟು ಇದ್ದಾರೆ. ಎರಡು ವರ್ಷಗಳಿಂದ ಸಕ್ಕರೆ ಬೆಲೆ ಕುಸಿದಿರುವ ಪರಿಣಾಮದಿಂದ ಕಬ್ಬು ಬೆಳೆಗಾರ ಸಂಪೂರ್ಣವಾಗಿ ವಿನಾಶದ ಅಂಚಿಗೆ ಬಂದಿದ್ದ. ಈ ವರ್ಷ ಮಾತ್ರ ಸಕ್ಕರೆಗೆ ಒಂದು ವಿಶೇಷವಾದ ಬೆಲೆ ಬಂದಿದ್ದರಿಂದ ಒಂದು ಸ್ವಲ್ಪ ನೆಮ್ಮದಿಯ ಜೀವನ ಈ ಭಾಗದ ಕಬ್ಬು ಬೆಳೆಗಾರರಿಗೆ ಬಂದಿದೆ. ನಮಗಿರುವಂಥ ಒಂದು ಅನುಮಾನವೇನೆಂದರೆ, ಅಲ್ಲಲ್ಲಿ ಬಂದಿರುವಂಥ ಸುದ್ದಿಗಳ ಪ್ರಕಾರ, ಇಲ್ಲಿ ಸಾಕಷ್ಟು ಸಕ್ಕರೆ ಉತ್ಪಾದನೆಯಾಗುತ್ತಿದ್ದರೂ ಕೂಡ, ನಮಗೆ ಬೇಕಾಗುವಷ್ಟು ಸಕ್ಕರೆ ದಾಸ್ತಾನು ಇದ್ದರೂ ಕೂಡ, ಕೇಂದ್ರ ಸರ್ಕಾರ ವಿದೇಶದಿಂದ raw sugar ಅನ್ನು ರಫ್ತು ಮಾಡಿಕೊಂಡು, ಇಲ್ಲಿ ಅದನ್ನು ಮತ್ತೊಮ್ಮೆ ಶುದ್ಧೀಕರಿಸಿ ಮಾರುಕಟ್ಟೆಗೆ ಬಿಡತಕ್ಕಂಥ ಒಂದು ಸಂಚು ನಡೆದಿದೆ. ಅಕಸ್ಮಾತ್ ವಿದೇಶದಿಂದ ಈ ರೀತಿ ಸಕ್ಕರೆಯನ್ನು ತರಿಸಿಕೊಂಡು ಮಾರುಕಟ್ಟೆಗೆ ಬಿಟ್ಟಿದ್ದೇ ಆದರೆ ಮತ್ತೊಮ್ಮೆ ಸಕ್ಕರೆಯ ಬೆಲೆ ಕುಸಿದು ಕಬ್ಬು ಬೆಳೆಗಾರ ದಿವಾಳಿಯ ಅಂಚಿಗೆ ಬರುತ್ತಾನೆ. ಅದನ್ನು ತಡೆಯುವ ದೃಷ್ಟಿಯಿಂದ ಈ ಸದನ ಅದರ ಬಗ್ಗೆ ಪಕ್ಷಾತೀತವಾಗಿ ಯೋಚನೆಯನ್ನು ಮಾಡಿ, ಕೇಂದ್ರ ಸರ್ಕಾರದ ಮೇಲೆ ಯಾವ ರೀತಿ ಒತ್ತಡವನ್ನು ತರಬೇಕು, ಯಾವ ರೀತಿ ಪ್ರಭಾವವನ್ನು ಹಾಕಿ ಕಬ್ಬು ಬೆಳೆಗಾರರನ್ನು ಉಳಿಸಬೇಕು ಎನ್ನುವ ದೃಷ್ಟಿಯಿಂದ ಚಿಂತನೆ ಆಗಬೇಕು ಎಂದು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಸನ್ಮಾನ್ಯ ವಿರೋಧ ಪಕ್ಷದ ಮುಖಂಡರಲ್ಲಿ ತಮ್ಮ ಮೂಲಕ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಹೇಳುವುದೇನೆಂದರೆ, ಈ ಕಬ್ಬು ಬೆಳೆಗಾರರಿಗೆ ಒಂದು ವಿಶೇಷವಾದಂಥ ಪರ್ಯಾಯ ಬೆಳೆಯನ್ನು ಕೊಡಲಿಕ್ಕೆ ಸಾಧ್ಯವಿದೆ. Sugar beet ಎನ್ನುವಂಥ ಒಂದು ಗಡ್ಡೆ ಬೆಳೆಯುತ್ತದೆ. ಮಹಾರಾಷ್ಟ್ರದಲ್ಲಿ ಅದನ್ನು ಬೆಳೆದು ಪೂನಾದಲ್ಲಿ ಒಂದು ಫ್ಯಾಕ್ಟರಿಯನ್ನು ಹಾಕಿಕೊಂಡಿದ್ದಾರೆ. ಅದರ ಮೂಲಕ ಸಕ್ಕರೆ ಉತ್ಪಾದನೆ ಮಾಡಬಹುದು, ವಿದ್ಯುತ್ ಉತ್ಪಾದನೆ ಮಾಡಬಹುದು, ಇಥೆನಾಲ್ ಕೂಡ ಉತ್ಪಾದನೆ ಮಾಡಬಹುದು. ದನಗಳಿಗೆ ಮೇವು ಕೂಡ ಕೊಡತಕ್ಕಂಥ ವ್ಯವಸ್ಥೆ ಅದರಿಂದ ಇದೆ. ಅದು ಆರು ತಿಂಗಳಲ್ಲಿ ಬರತಕ್ಕಂಥ ಬೆಳೆ. ಆ ಬೆಳೆಯ ವಿಶೇಷ ಎಂದರೆ, saline lands ಎಂದು ನಾವು ಯಾವುದನ್ನು ಹೇಳುತ್ತೇವೆ, ಸವಳು, ಜವಳು ಭೂಮಿಯಲ್ಲೂ ಕೂಡ ಈ ಬೆಳೆ ಬೆಳೆಯುತ್ತದೆ. ಇದರಲ್ಲಿ ಮಹಾರಾಷ್ಟ್ರ ಬಹಳಷ್ಟು ಪ್ರಗತಿಯನ್ನು ಸಾಧಿಸಿದೆ.

ಅದರ ಬಗ್ಗೆ ಸನ್ಮಾನ್ಯ ಮಂತ್ರಿಗಳು ವಿಶೇಷವಾಗಿ ಅಧ್ಯಯನವನ್ನು ಮಾಡಿ, ಅಲ್ಲಿಗೆ ಒಂದು ತಂಡವನ್ನು ಕಳುಹಿಸಿ, ಆ ಒಂದು ವ್ಯವಸ್ಥೆಯನ್ನು ಇಲ್ಲಿಯೂ ತಂದರೆ ಈ ಭಾಗದ ಕೃಷ್ಣಾ, ತುಂಗಭದ್ರಾ ಹೀಗೆ ಯಾವುದೇ ಒಂದು ಜವಳು ಪ್ರದೇಶದಲ್ಲಿ sugar caneಅನ್ನು ಬೆಳೆದ ರೈತರಿಗೆ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಲು ಸಾಧ್ಯವಾಗುತ್ತದೆ.

ಅಧ್ಯಕ್ಷರು :- ಇದು ಗಮನ ಸೆಳೆಯುವ ಸೂಚನೆ. ಇದರಲ್ಲಿ ಎಲ್ಲವನ್ನೂ explain ಮಾಡುತ್ತಾ ಹೋದರೆ, there is no end at all.

ಶ್ರೀ ಶ್ರೀಕಾಂತ ಎಸ್ ಕುಲಕರ್ಣಿ:- ಉಳಿದ ವಿಷಯಗಳನ್ನು ನಮ್ಮ ಇತರ ಶಾಸಕರು ಹೇಳುತ್ತಾರೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸುಭಾಷ್ ಆರ್ ಗುತ್ತೇದಾರ್ (ಆಳಂದ) :- ಮಾನ್ಯ ಅಧ್ಯಕ್ಷರೆ, ಇವತ್ತು ಕಬ್ಬು ಬೆಳೆಗಾರರ ಬಗ್ಗೆ ಮಾತನಾಡಲಿಕ್ಕೆ ಅನುವು ಮಾಡಿಕೊಟ್ಟಿದ್ದಕ್ಕಾಗಿ ಮೊದಲಿಗೆ ತಮಗೆ ವಂದಿಸುತ್ತೇನೆ. ನಮ್ಮ ಕ್ಷೇತ್ರದಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ. ಕಬ್ಬು ಬೆಳೆಗಾರರು ಬಹಳ ತೊಂದರೆಯಲ್ಲಿದ್ದಾರೆ. ಇಲ್ಲಿ ನಮ್ಮ ಮುಖ್ಯಮಂತ್ರಿಗಳಿದ್ದಾರೆ, ಗುಲ್ಬರ್ಗ ಉಸ್ತುವಾರಿ ಮಂತ್ರಿಗಳಿದ್ದಾರೆ, ಸಕ್ಕರೆ ಮಂತ್ರಿಗಳೂ ಇದ್ದಾರೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಹಿಂದೆ ಮುಖ್ಯಮಂತ್ರಿಗಳಾಗಿದ್ದಂಥ ಮಾನ್ಯ ಧರಂಸಿಂಗ್‌ರವರು ಏಳು ವರ್ಷ ರೇಣುಕಾ ಶುಗರ್ಸ್‌ರವರಿಗೆ ಲೀಸ್ ಮೇಲೆ ಕೊಟ್ಟಿದ್ದರು. ಎರಡು ಸೀಸನ್‌ಗೆ ಅವರು ನಡೆಸಿದರು. ಮೂರನೆ ಸೀಸನ್‌ಗೆ ಈ ಸಲ ಅವರು ಫ್ಯಾಕ್ಟರಿಯನ್ನು ನಡೆಸಲಿಲ್ಲ, ಅದನ್ನು ಬಂದ್ ಮಾಡಿದ್ದಾರೆ.

ಮಾಜಿ ಮುಖ್ಯಮಂತ್ರಿಯವರಾದ ಧರ್ಮಸಿಂಗ್‌ರವರು 7 ವರ್ಷ ರೇಣುಕಾ ಶುಗರ್ ಫ್ಯಾಕ್ಟರಿಯವರಿಗೇನು ಲೀಸ್ ಮೇಲೆ ಕೊಟ್ಟಿದ್ದರು, ಅವರು ಎರಡು season ನಡೆಸಿದರು. ಮೂರನೇ season ನಲ್ಲಿ ಅಂದರೆ ಈ ಸಲ ಅವರು ನಡೆಸಲಿಲ್ಲ. ಆ ಫ್ಯಾಕ್ಟರಿಯನ್ನು ಬಂದ್ ಮಾಡಿದ್ದಾರೆ. ಆಗಸ್ಟ್‌ನಲ್ಲಿ ಅದು ಪ್ರಾರಂಭವಾಗಬೇಕಿತ್ತು. ನಾನು ಆ ಫ್ಯಾಕ್ಟರಿ ಹತ್ತಿರ ಹೋಗಿ ಸತ್ಯಾಗ್ರಹ ಮಾಡಿ, ಡಿ.ಸಿ.ಯವರಿಗೆ ಮನವಿ ಕೊಟ್ಟೆ, ನಂತರ ಡಿ.ಸಿ.ಯವರು ಒಂದು ಮೀಟಿಂಗ್ ಕರೆದರು. ಅವರಿಗೆ, ನಮಗೆ ಮತ್ತು ಡಿ.ಸಿ. ನೇತೃತ್ವದಲ್ಲಿ ಮೀಟಿಂಗ್ ಮಾಡಿದಾಗ ಜನವರಿಗೆ 1st ಗೆ ಪ್ರಾರಂಭ ಮಾಡುತ್ತೇವೆ, sugar cane mature ಆಗಿಲ್ಲವೆಂದು ಏನೇನೋ ನೆವ ಹೇಳುತ್ತಾ ಬಂದರು, ಈಗ ಜನವರಿ ತಿಂಗಳು ಮುಗಿಯುತ್ತಾ ಬಂತು,

ಇನ್ನೂ ಪ್ರಾರಂಭ ಮಾಡಿಲ್ಲ. ಈಗ ಬಂದು ಮತ್ತೊಂದು ಲೆಟರ್ ಕೊಟ್ಟಿದ್ದಾರೆ ಅದೇನೆಂದರೆ, ಡಿ.ಸಿ.ಸಿ. ಬ್ಯಾಂಕ್, ಬೀದರ್‌ನವರದು ಇಷ್ಟು ಬಾಕಿ ಇದೆ, ICICI Bank ನದ್ದು ಇಷ್ಟು ಬಾಕಿ ಇದೆ, IDBI, ಯಾವ್ಯಾವ ಬ್ಯಾಂಕಿನದು, ಯಾರ್ಯಾರದು ಎಷ್ಟೆಷ್ಟು ಬಾಕಿ ಇರುವುದರಿಂದ ನಮಗೆ ನಡೆಸಲಿಕ್ಕಾಗುವುದಿಲ್ಲವೆಂದು ಅವರು ಹೇಳುತ್ತಿದ್ದಾರೆ. ಹೀಗಾದರೆ, ಅಲ್ಲಿ ಕಬ್ಬು ಬೆಳೆದವರ ಗತಿ ಏನು? ಈಗ ಅವರು ಸರ್ವೆ ಮಾಡಿ ಬಂದಿದ್ದಾರೆ. 13000 ಟನ್ ಕಬ್ಬು ಅಲ್ಲಿ ಬೆಳದು ನಿಂತಿದೆ. ಇವತ್ತು ಅವರು ಎಲ್ಲಿಗೆ ಹೋಗಬೇಕು? ಈ ರೇಣುಕಾ ಶುಗರ್ಸ್‌ನವರು ಅಫಜಲಪುರದ ಹವಳಗಾದಲ್ಲಿ ಹೊಸದಾಗಿ factory ತೆರೆದಿರುವುದರಿಂದ ಇಲ್ಲಿಯ ಕಬ್ಬನ್ನೂ ಅಲ್ಲಿಗೆ ತೆಗೆದುಕೊಂಡು ನುರಿಸುತ್ತಿದ್ದಾರೆ. ಹಾಗಾದರೆ, ಇಲ್ಲಿರುವ factory ಯ ನೌಕರರ ಗತಿ ಏನು? ಈ factory ವ್ಯಾಪ್ತಿಯ ಕಬ್ಬು ಬೆಳೆಯುವ ರೈತರ ಗತಿ ಏನು? ಇದರ ಬಗ್ಗೆ ಮುಖ್ಯಮಂತ್ರಿಯವರಾಗಲಿ, ಉಸ್ತುವಾರಿ ಮಂತ್ರಿಯವರಾಗಲಿ, ಸಕ್ಕರೆ ಸಚಿವರಾಗಲಿ ಕ್ರಮ ತೆಗೆದುಕೊಳ್ಳಬೇಕು. ಎರಡನೆಯದಾಗಿ, Governor ರವರು 160 ರೂಪಾಯಿಗಳನ್ನು ಕೊಡಬೇಕೆಂದು ಬೆಂಬಲ ಬೆಲೆಯನ್ನು declare ಮಾಡಿದ್ದರು. ಆ 160 ರೂಪಾಯಿ ಬೆಂಬಲ ಬೆಲೆಯನ್ನು ಅವರಿಗೆ ಕೊಟ್ಟಿಲ್ಲ. ಅದನ್ನು ಕೊಡಿ ಎಂದು ನಾವು ಈಗಾಗಲೇ ಲೆಟರ್ ಕೊಟ್ಟಿದ್ದರೂ, ಅವರು ಒಂದು ಟನ್‌ಗೆ 50 ರೂಪಾಯಿ ಕೊಟ್ಟಿದ್ದಾರೆ. ಅವರು ಏನೇನೋ ಸುಳ್ಳು ನೆವ ಹೇಳಿ ನಾವು 160 ರೂಪಾಯಿ ರೈತರಿಗೆ ಕೊಟ್ಟಿದ್ದೇವೆಂದು ಮುಖ್ಯಮಂತ್ರಿಯವರಿಗೇ ಲೆಟರ್ ಕೊಟ್ಟಿದ್ದಾರೆ. ಅಲ್ಲಿ ಅವರು ಕಳೆದ ವರ್ಷ 84,000 ಟನ್ ಕಬ್ಬನ್ನು ನುರಿಸಿದ್ದಾರೆ. ಅವರು ರೈತರಿಗೆ ಒಂದು ಟನ್‌ಗೆ 110 ರೂಪಾಯಿಗಳಂತೆ ಬಾಕಿ ಉಳಿಸಿಕೊಂಡಿದ್ದಾರೆ. ಅಲ್ಲಿಯ ರೈತರ ಗತಿ ಏನು? ಕಾರ್ಖಾನೆ ಪ್ರಾರಂಭ ಮಾಡಬೇಕು ಮತ್ತು ಅಲ್ಲಿಯ ರೈತರಿಗೆ ಕೊಡಬೇಕಾದ ಪ್ರತಿ ಟನ್‌ಗೆ 110 ರೂಪಾಯಿ ಬಾಕಿ ಏನಿದೆ ಅದನ್ನು ಕೊಡಿಸಬೇಕು. ಅಲ್ಲಿ 600-800 ನೌಕರರಿದ್ದಾರೆ. ಅವರ ಗತಿ ಏನು? ಇದರ ಬಗ್ಗೆ ಸರ್ಕಾರ ಉತ್ತರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಸಾರ್ವಭೌಮ ಬಗಲಿ (ಇಂಡಿ) :- ಸನ್ಮಾನ್ಯ ಸಕ್ಕರೆ ಸಚಿವರು ಒಂದು ಹಾರಿಕೆಯ ಉತ್ತರವನ್ನು ಕೊಟ್ಟು ಪಾರಾಗಿದ್ದಾರೆ. ಸನ್ಮಾನ್ಯ ಸಕ್ಕರೆ ಸಚಿವರು ನಾವು ಪರಿಶೀಲಿಸುತ್ತೇವೆಂದು ಹೇಳುತ್ತಾರೆ. ಸ್ವಾಮಿ ನೀವೇನು ಪರಿಶೀಲನೆ ಮಾಡುತ್ತೀರಿ? ರೈತರು ಎರಡು ವರ್ಷಗಳಿಂದ ಪರಿಹಾರ ಕಾಣದೆ ಕಷ್ಟದಲ್ಲಿದ್ದಾರೆ. ಬಿಜಾಪುರ ಜಿಲ್ಲೆಗೆ special ಆಗಿ ಏನಾದರೂ ಕೊಟ್ಟಿದ್ದೀರಾ? ಅರ್ಹರು, ಅನರ್ಹರು

ಎನ್ನುವ ಒಂದು dividing factor, ಉಳಿದ ಯಾವ ಜಿಲ್ಲೆಗಳಲ್ಲಿ ಅರ್ಹ ಮತ್ತು ಅನರ್ಹ ಎನ್ನುವ ಮಾತನ್ನು ನೀವು ಮಾಡಿದ್ದೀರಿ? ಏಕೆ ಈ ವಿಜಾಪುರ ಜಿಲ್ಲೆಯ ಬಗ್ಗೆ ಸಕ್ಕರೆ ಸಚಿವರು ಮಲತಾಯಿ ಧೋರಣೆ ಅನುಸರಿಸುತ್ತಿದ್ದಾರೆ? ಇವತ್ತು what is the criteria for your ಅರ್ಹ, ಅನರ್ಹ? ಎರಡೂ criteria same. ಇಲ್ಲಿ ಒಂದು independent ನಿವೃತ್ತ ಕೃಷಿ ಇಲಾಖೆಯ ನಿರ್ದೇಶಕರು ಕೊಟ್ಟಂಥ ಒಂದು ವರದಿಯನ್ನು ತಮ್ಮ ಗಮನಕ್ಕೆ ತರುತ್ತೇನೆ. ಯಾವ ರೈತನಿಗೆ ಅರ್ಹ ಎಂದು ಹೇಳಿದ್ದಾರೆ, RTC ಕಬ್ಬು ಎಂದು ನಮೂದಾಗಿಲ್ಲ ಅಂಥವರಿಗೆ ಕೊಟ್ಟಿದ್ದಾರೆ. ಮತ್ತೊಬ್ಬ ರೈತನಿಗೆ RTC ಯಲ್ಲಿ ಕಬ್ಬು ಎಂದು ನಮೂದಾಗಿಲ್ಲವೆಂದು ಅನರ್ಹ ಮಾಡಿದ್ದಾರೆ. ಇದು ಯಾವ ನ್ಯಾಯ? ಎರಡನೇ objection ಎಂದರೆ, ಫೋಟೋ ತೆಗೆಸಿರುವುದಿಲ್ಲ ಎಂದು ಕೊಟ್ಟಿದ್ದಾರೆ. ಫೋಟೋ ಯಾರು ತೆಗೆಯುತ್ತಾರೆ? ರೈತರು ಫೋಟೋ ತೆಗೆಯುತ್ತಾರೆಯೇ? Is it not the duty of the Officers who go there and check it? ಅವರು ಫೋಟೋ ತೆಗೆದಿಲ್ಲ. ಮೂರನೇ objection ಏನೆಂದರೆ, ಇದಕ್ಕೆ ನೋಡಲ್ ಅಧಿಕಾರಿಗಳು ಸಹಿ ಮಾಡಿರುವುದಿಲ್ಲವೆಂದು ಕೊಟ್ಟಿದ್ದಾರೆ. ನೋಡಲ್ ಅಧಿಕಾರಿಯ ಸಹಿಯನ್ನು ರೈತ ಮಾಡಬೇಕೆ? ಈ ರೀತಿಯಾಗಿ ಅನರ್ಹ ಎಂದು ಮಾಡಿರುವುದೇನಿದೆ, ಅದು ಅಧಿಕಾರಿಗಳ ಮಟ್ಟದಲ್ಲಾಗಿರುವಂಥದ್ದು. ವಿಶೇಷವಾಗಿ, ಆಗಿನ ಕಾಲದಲ್ಲಿ ಕಬ್ಬು ಆಯುಕ್ತರ ಕಛೇರಿಯಲ್ಲಿ ನಡೆದಂಥ ಈ ಘಟನೆಯಿಂದಾಗಿ ರೈತರು ಸಂಕಷ್ಟಕ್ಕೊಳಗಾಗಿದ್ದಾರೆ. ಯಾವಾಗ ರೈತರು ಅನರ್ಹರೆಂದು ಮಾಹಿತಿ ಬಂತು, ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಂಡರು. ಆ ಇಬ್ಬರೂ ರೈತರ ಹೊಲದಲ್ಲಿ ಕಬ್ಬು ಇತ್ತು. ಇದಕ್ಕೆ ಯಾರು ಹೊಣೆ? ಆ ಇಬ್ಬರು ರೈತರ ಆತ್ಮಹತ್ಯೆಗೆ ಆ ಮೂಲ ಇದ್ದಂಥ ಕಬ್ಬಿನ ಆಯುಕ್ತರು ಅದಕ್ಕೆ ಹೊಣೆ. ಅವರ ಮೇಲೆ ಈ ಒಂದು ಹೊಣೆಗಾರಿಕೆಯನ್ನು ಹಾಕಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಅದನ್ನು ಬಿಟ್ಟು, ಸನ್ಮಾನ್ಯ ಸಕ್ಕರೆ ಸಚಿವರು, ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಾರೆ. ನೀವು ಇನ್ನೂ ಎಷ್ಟು ವರ್ಷ ಪರಿಶೀಲನೆ ಮಾಡುತ್ತೀರಿ?

ಅಧ್ಯಕ್ಷರು :- ನಿಮ್ಮ ಸಲಹೆ ಏನು ಎನ್ನುವುದನ್ನು ಹೇಳಿ.

ಡಾ॥ ಸಾರ್ವಭೌಮ ಬಗಲಿ :- ಸಲಹೆ ಏನೆಂದರೆ, he should give a positive answer in this House. ಪರಿಶೀಲನೆ

ಮಾಡುತ್ತೇವೆಂದು ಹೇಳುವುದು ನಡೆಯುವುದಿಲ್ಲ. ಯಾವಾಗ ಕೊಡುತ್ತೀರಾ? What is your time limit? Nothing more than that.

ಶ್ರೀ ರಮೇಶ್ ಭೂಸನೂರ (ಸಿಂಧಗಿ) :- ದೇಶದ ಬೆನ್ನೆಲುಬು ಎಂದು ಕರೆಸಿಕೊಳ್ಳುವ ರೈತರ ಬೆನ್ನ ಮೇಲೆ ಮಾತ್ರ ಸದಾ ಹೊರಲಾರದಷ್ಟು ಹೊರೆಯ ಭಾರ. ಇದನ್ನು ಇಳಿಸಿ, ಬೆನ್ನಿಗೆ ಬಲ ತುಂಬುವ ಕೆಲಸವನ್ನು ಸನ್ಮಾನ್ಯ ಮುಖ್ಯಮಂತ್ರಿಯವರಾದ ಡಾ॥ಬಿ.ಎಸ್. ಯಡಿಯೂರಪ್ಪನವರು ಮಾಡುತ್ತಿದ್ದಾರೆ. ಅದರ ಜೊತೆಯಲ್ಲಿ, ಬಿಜಾಪುರ ಜಿಲ್ಲೆಯಲ್ಲಿ 2006-2007ನೇ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗೆ ಸಾಗಣೆಯಾಗದೇ ಇದ್ದ ಕಬ್ಬಿಗೆ ಪರಿಹಾರ ಧನವನ್ನು ಸರ್ಕಾರ ಘೋಷಣೆ ಮಾಡಿತ್ತು. ಆದರೆ, ಇನ್ನೂವರೆಗೆ ಘೋಷಣೆ ಮಾಡಿದಂಥ ಪರಿಹಾರವನ್ನು ಕೊಟ್ಟಿಲ್ಲ. ಸರ್ಕಾರ ಅನರ್ಹರಾದ ರೈತರ ಪಟ್ಟಿ ಪರಿಶೀಲನೆಗೆ ನಾಲ್ವರು ತಜ್ಞರ ಸಮಿತಿಯನ್ನು ರಚನೆ ಮಾಡಿತ್ತು. ಆ ಅನರ್ಹ ರೈತರ ಪಟ್ಟಿಯ ಪೈಕಿ ಶೇ.90ರಷ್ಟು ರೈತರು ಪರಿಹಾರ ಪಡೆಯಲು ಅರ್ಹತೆ ಹೊಂದಿದ್ದಾರೆಂದು ಸಮಿತಿ ಈಗಾಗಲೇ ವರದಿ ಕೊಟ್ಟಿದೆ. ಆ ಸಮಿತಿಯ ಪ್ರಕಾರ, ಇಂಡಿ ತಾಲ್ಲೂಕಿನ 8717 ರೈತರಿಗೆ ಒಂದು ಹೆಕ್ಟೇರ್‌ಗೆ 25000 ರೂಪಾಯಿಗಳಂತೆ 25 ಕೋಟಿ ರೂಪಾಯಿ, ಸಿಂಧಗಿ ತಾಲ್ಲೂಕಿನ 5480 ರೈತರಿಗೆ 18 ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಬೇಕೆಂದು ಜಿಲ್ಲಾಡಳಿತ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿತ್ತು. ಆದರೆ, ಸಮೀಕ್ಷೆಯಲ್ಲಿ ಲೋಪದೋಷವಿದೆ ಎಂದು ಹೊಸ ನೀತಿಯನ್ನು ತರಲು ಮತ್ತೆ ಸಮಿತಿಯನ್ನು ರಚನೆ ಮಾಡಿದೆ. ಅದರ ಪ್ರಕಾರ ಇಂಡಿ ತಾಲ್ಲೂಕಿನ ರೈತರಿಗೆ 16.78 ಕೋಟಿ ರೂಪಾಯಿಗಳನ್ನು, ಸಿಂಧಗಿ ತಾಲ್ಲೂಕಿನ ರೈತರಿಗೆ 10.97 ಕೋಟಿ ರೂಪಾಯಿಗಳು ಒಟ್ಟಾರೆ 27.27 ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಬೇಕಾಗಿದೆ. ನಾನು ಸರ್ಕಾರವನ್ನು ಪ್ರಾರ್ಥನೆ ಮಾಡುವುದೇನೆಂದರೆ, ಸನ್ಮಾನ್ಯ ಮುಖ್ಯಮಂತ್ರಿಯವರ ಮೂಲಕ, ಅಧ್ಯಕ್ಷರ ಮೂಲಕ, ಸನ್ಮಾನ್ಯ ಸಕ್ಕರೆ ಆಯುಕ್ತರ ಮೂಲಕ, ಸಕ್ಕರೆ ಮಂತ್ರಿಗಳ ಮೂಲಕ ಸರ್ಕಾರವನ್ನು ಕೋರುತ್ತೇನೆ, ಪ್ರಾರ್ಥನೆ ಮಾಡುತ್ತೇನೆ, ದಯವಿಟ್ಟು, ರೈತರ ಸಂಕಷ್ಟದಲ್ಲಿ ಪಾಲ್ಗೊಳ್ಳಿ ಎನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿದ್ದು ಸವದಿ(ತೇರದಾಳ) :- ಆಳಂದ ಸಕ್ಕರೆ ಕಾರ್ಖಾನೆ ಬಗ್ಗೆ ಈಗಾಗಲೇ ಅನೇಕ ಸದಸ್ಯರು ಮಾತನಾಡಿದ್ದಾರೆ. ರಾಜ್ಯಪಾಲರ ಆಡಳಿತದಲ್ಲಿ 160 ರೂಪಾಯಿಗಳ ಬೆಂಬಲ ಬೆಲೆಯನ್ನು ಕೊಡುತ್ತೇವೆಂದು ಹೇಳಿದ್ದರು. ಆದರೆ, ಇದುವರೆಗೆ factory ಯವರು ಆ ಹಣವನ್ನು ಕೊಟ್ಟಿಲ್ಲ. ಮಾನ್ಯ ಸಚಿವರು ಸಹ 160

ರೂಪಾಯಿಗಳನ್ನು ಕೊಡಿಸುವುದು ನನ್ನ ಜವಾಬ್ದಾರಿ, ನಾನು ಕೊಡಿಸುತ್ತೇನೆಂದು ಸಾಕಷ್ಟು ಸಲ ಹೇಳಿದ್ದಾರೆ. ಇದುವರೆಗೆ ಸಹ ಬಹಳಷ್ಟು factory ಯವರು ಕೊಟ್ಟಿಲ್ಲ. ದಯವಿಟ್ಟು, ಅದನ್ನು ಕೊಡಿಸಬೇಕು. Factory ಯವರು, ಈ ವರ್ಷದ Purchase Tax ಏನಿದೆ ಅದನ್ನು ಮನ್ನಾ ಮಾಡಿ ಆಗ ನಾವು 160 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳುತ್ತಾರೆ. ನೀವು ಮನ್ನಾ ಮಾಡುತ್ತೀರೋ ಅಥವಾ ಅವರಿಂದ ಕೊಡಿಸುತ್ತೀರೋ? ದಯವಿಟ್ಟು, ಕೊಡಿಸಬೇಕು. ಎರಡನೆಯದಾಗಿ, ಈಗಾಗಲೇ ಇಂಡಿ, ಸಿಂಧಗಿ ಕಡೆ ಪರಿಹಾರ ಕೊಡುವ ಪ್ರಾಬ್ಲಂ ಇದೆ. ನಮ್ಮ ಭಾಗದಲ್ಲಿ ಪ್ರಾಬ್ಲಂ ಯಾವ ರೀತಿ ಎಂದರೆ, ಅರ್ಧದಷ್ಟು ಪರಿಹಾರ ರೈತರಿಗೆ ಬಂದಿದೆ. ಇನ್ನರ್ಧ ಏಕೆ ಬಿಟ್ಟಿದ್ದಾರೆಂದರೆ, ಆ ಕಾರ್ಖಾನೆಯವರು ಸರ್ವೆ ಮಾಡಿದ್ದಾರೆ ಅದಕ್ಕೆ ನಾವು ಕೊಡುವ ಹಾಗಿಲ್ಲ, ಅದನ್ನು ಕಾರ್ಖಾನೆಯವರೇ ಎಂದು ಹೇಳುತ್ತಾರೆ. ಕಾರ್ಖಾನೆಯವರು ರೈತರಿಗೆ ಕೊಟ್ಟಿಲ್ಲ. ಆದ್ದರಿಂದ, ಅರ್ಧದಷ್ಟು ಕಬ್ಬು ಉಳಿದಂಥ ರೈತರು ಸಂಕಷ್ಟದಲ್ಲಿದ್ದಾರೆ. ಆದ್ದರಿಂದ, ಸರ್ಕಾರದವರಾದರೂ ಕೊಡಬೇಕು ಇಲ್ಲದಿದ್ದರೆ ಕಾರ್ಖಾನೆಯವರಿಂದ ಕೊಡಿಸಬೇಕೆನ್ನುವ ಬೇಡಿಕೆಯನ್ನು ಸರ್ಕಾರದ ಮುಂದಿಡುತ್ತಿದ್ದೇನೆ. ಮೂರನೆಯದಾಗಿ, ಈಗಾಗಲೇ ಶ್ರೀಕಾಂತ್ ಕುಲಕರ್ಣಿಯವರು ಪ್ರಸ್ತಾಪ ಮಾಡಿದ ಪ್ರಕಾರ, ರೈತರಿಗೆ 3-4 ವರ್ಷಗಳಿಂದ ರೇಟ್ ಕಡಿಮೆಯಾದದ್ದರಿಂದ ಸಾಕಷ್ಟು ಸಾಲಗಾರರಾಗಿದ್ದಾರೆ. ಈ ವರ್ಷವೇನೋ ಸ್ವಲ್ಪ ರೇಟ್ ಚೆನ್ನಾಗಿದೆ. ಇಂಥ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಸಕ್ಕರೆಯನ್ನು import ಮಾಡಿಕೊಳ್ಳುವುದರಿಂದ, ಸಕ್ಕರೆ ರೇಟ್ ಇಳಿದರೆ ಮತ್ತೆ ರೈತರು ಸಂಕಷ್ಟಕ್ಕೆ ಸಿಕ್ಕಿಕೊಳ್ಳುವಂಥ ಪರಿಸ್ಥಿತಿ ಬರುತ್ತದೆ. ಅದಕ್ಕಾಗಿ ನಮ್ಮಲ್ಲಿಯೇ ಸಾಕಷ್ಟು ಅಂದರೆ 50 ಲಕ್ಷ ಟನ್ ಸಕ್ಕರೆ ದಾಸ್ತಾನಿರುವಾಗ ಬೇರೆ ದೇಶದಿಂದ ಸಕ್ಕರೆಯನ್ನು ತರಿಸಿಕೊಳ್ಳಬಾರದೆಂಬ ವಿನಂತಿಯನ್ನು ಕೇಂದ್ರ ಸರ್ಕಾರಕ್ಕೆ ನಮ್ಮ ರಾಜ್ಯ ಸರ್ಕಾರದಿಂದ ಮಾಡಿಕೊಳ್ಳಬೇಕೆಂಬ ಸಲಹೆಯನ್ನು ಮಾನ್ಯ ಸಚಿವರಿಗೆ ಕೊಡಬಯಸುತ್ತೇನೆ. ಈ ಮೂರೂ ವಿಷಯಗಳ ಬಗ್ಗೆ ಸಚಿವರು ಉತ್ತರ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) :- ಈಗಾಗಲೇ ಇದರ ಬಗ್ಗೆ ಸಾಕಷ್ಟು ವರದಿಗಳು ಬಂದಿವೆ. ಆದರೆ, ಕಳೆದ 3 ತಿಂಗಳ ಹಿಂದೆ ಎಲ್ಲಾ ರೈತರು ಆಮರಣ ಉಪವಾಸ ಸತ್ಯಾಗ್ರಹ ಮಾಡಿದರು. ಎಲ್ಲಾ ಶಾಸಕರು ಪಕ್ಷವನ್ನು ಬದಿಗಿಟ್ಟು ವಿನಂತಿಸಿದ್ದೇವೆ. ಸನ್ಮಾನ್ಯ ಉಸ್ತುವಾರಿ ಸಚಿವರು ಕೂಡ ರೈತರಲ್ಲಿ ವಿನಂತಿಸಿ, ತಕ್ಷಣ ಸರ್ಕಾರದಿಂದ ಕೊಡಿಸುತ್ತೇನೆಂದು ಹೇಳಿದ್ದಾರೆ. ನಾನು ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ. ಸಕ್ಕರೆ ಸಚಿವರು ಹೇಳುವುದಕ್ಕಿಂತಲೂ

ಈ ಬಗ್ಗೆ ಮುಖ್ಯಮಂತ್ರಿಯವರು ಹೇಳಿದರೆ ಒಳ್ಳೆಯದು. ಬಿಜಾಪುರ ಜಿಲ್ಲೆಯ ಎಲ್ಲ ರೈತರ ಪರವಾಗಿ ನಾನು ಮನವಿ ಮಾಡಿಕೊಳ್ಳುತ್ತೇನೆ, ಮುಖ್ಯಮಂತ್ರಿಯವರು ಮನಸ್ಸು ಮಾಡಿದರೆ ಮಾತ್ರ ಇದಕ್ಕೆ ಪರಿಹಾರ ಕಾಣಲಿಕ್ಕೆ ಸಾಧ್ಯವಿದೆ. ದಯವಿಟ್ಟು, ಬಿಜಾಪುರ ಜಿಲ್ಲಾ ಕಬ್ಬು ಬೆಳೆಗಾರರ ಬದುಕನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರ ಸದನದಲ್ಲಿ ಒಂದು ಗಟ್ಟಿ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ನಾನು ಎಲ್ಲಾ ರೈತರ ಪರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಮುಖ್ಯಮಂತ್ರಿಯವರು ದಯಮಾಡಿ ಈ ಬಗ್ಗೆ ಸ್ಪಷ್ಟನೆ ಕೊಡಬೇಕು ಮತ್ತು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಶಿವರಾಜ್ ತಂಗಡಗಿ :- ಕುಲಕರ್ಣಿಯವರು ಕೇಳಿದಂತೆ, ಸಕ್ಕರೆ ಆಮದಿನ ವಿಷಯ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ. ಆದರೂ, ಆಮದು ಮಾಡಿಕೊಳ್ಳಬಾರದು ಎನ್ನುವ ವಿನಂತಿಯನ್ನು ಕೇಂದ್ರಸರ್ಕಾರಕ್ಕೆ ನಮ್ಮ ಸರ್ಕಾರದಿಂದ ಮಾಡುತ್ತೇವೆ. Sugar bid ಬಗ್ಗೆ ಮಾನ್ಯ ಸದಸ್ಯರು ಹೇಳಿದರು, Karnataka Sugar Institute ಮೂಲಕ ಆ ಕೆಲಸದ ಬಗ್ಗೆ ನಾವು ಪ್ರಯತ್ನ ಮಾಡುತ್ತೇವೆನ್ನುವ ಮಾತನ್ನು ಹೇಳಬಯಸುತ್ತೇನೆ. ಆಳಂದ ಶಾಸಕರು ಆಳಂದ ಸಕ್ಕರೆ ಕಾರ್ಖಾನೆ ಬಗ್ಗೆ ಪ್ರಸ್ತಾಪ ಮಾಡಿ, ಆ ಸಮಸ್ಯೆಯನ್ನು ನನ್ನ ಗಮನಕ್ಕೆ ತಂದಿದ್ದಾರೆ. ಈಗ ಅದರ ಬಗ್ಗೆ ಅಧಿಕಾರಿಗಳ ಜೊತೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲಿಕ್ಕೆ ನಾನು ಸಿದ್ಧನಿದ್ದೇನೆ. ಇನ್ನೋರ್ವ ಮಿತ್ರರಾದ ಬಗಲಿಯವರು ಸರ್ಕಾರ ಏನು ಪರಿಶೀಲನೆ ಮಾಡುತ್ತದೆಂದು ಕೇಳಿದ್ದಾರೆ. ಅಲ್ಲಿ ಯಾವ ರೀತಿ ಅವ್ಯವಹಾರ ಆಗಿದೆಯೆಂದರೆ ಬೇರೆ ಬೇರೆ ಹೊಲದಲ್ಲಿ ನಿಂತು ಫೋಟೋ ತೆಗೆಸಿದಂಥ ವ್ಯವಸ್ಥೆಯಾಗಿದೆ. ಈಗಾಗಲೇ 3 ಹಂತಗಳಲ್ಲಿ ನಿವೃತ್ತ ಅಧಿಕಾರಿಗಳು ಅದನ್ನು ಪರಿಶೀಲನೆ ಮಾಡಿ ಅದರ ಪೂರ್ಣ ವರದಿಯನ್ನು ಕೊಟ್ಟಿದ್ದಾರೆ. ಭೂಸನೂರರವರು 28 ಕೋಟಿ ರೂ. ಎಂದು ಹೇಳಿದರು. ಆದರೆ, ಅದು 28 ಕೋಟಿ ಅಲ್ಲ, ಇಂಡಿ ಮತ್ತು ಈ ಭಾಗಕ್ಕೆ 28 ಕೋಟಿ ರೂಪಾಯಿಗಳನ್ನು ಕೊಡುವ ವ್ಯವಸ್ಥೆಯಾಗಿದೆ. ಈಗ ಮೂರನೇ ಹಂತದ ಅಧಿಕಾರಿಗಳು ಏನು ಪರಿಶೀಲನೆ ಮಾಡಿ ವರದಿ ಕೊಟ್ಟಿದ್ದಾರೆ, ಅದರ ಬಗ್ಗೆ ಚರ್ಚೆ ಮಾಡಿ ಆದಷ್ಟು ಬೇಗ ರೈತರಿಗೆ ಮುಟ್ಟಿಸುವ ಕೆಲಸವನ್ನು ಮಾಡುವ ಪ್ರಯತ್ನವನ್ನು ಆದಷ್ಟು ಬೇಗ ಸರ್ಕಾರ ಮಾಡುತ್ತದೆ. 160 ರೂಪಾಯಿಗಳ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದರು. ಈ ಹಿಂದೆ ಕಾರ್ಖಾನೆ ಮಾಲೀಕರು 160 ರೂಪಾಯಿಗಳ ವಿಷಯಕ್ಕೆ ಸಂಬಂಧಿಸಿದಂತೆ, ಕೋರ್ಟ್‌ಗೆ ಹೋಗಿದ್ದರಿಂದ ಇದರಲ್ಲಿ ಕೆಲವು ಕಾನೂನು ತೊಡಕುಗಳಿದ್ದರೂ ನಮ್ಮ ಸರ್ಕಾರ ಗಮನಕ್ಕೆ ತೆಗೆದುಕೊಂಡಿದೆ. 60 ರೂಪಾಯಿ

ಗಳನ್ನು ಕೊಡುತ್ತೇವೆಂದು ಎಲ್ಲಾ ಸಕ್ಕರೆ ಕಾರ್ಖಾನೆಗಳವರು ಹೇಳಿ ಪತ್ರದ ಮೂಲಕ ನಮ್ಮ ಇಲಾಖೆಗೆ ಕೊಟ್ಟಿದ್ದಾರೆ. ಈಗ 100 ರೂಪಾಯಿಗಳನ್ನು ಸಹ ಕೊಟ್ಟಿದ್ದಾರೆ. ಇನ್ನುಳಿದ 60 ರೂಪಾಯಿಗಳನ್ನು ಕೊಡಲು ಇನ್ನೊಂದು ತಿಂಗಳ ಟೈಮ್ ಕೇಳಿದ್ದಾರೆ. 60 ರೂಪಾಯಿಗಳನ್ನು ಕೊಡುವ ಬಗ್ಗೆ ಈ ವಿಷಯವನ್ನು Cabinet ಮುಂದೆ ಇಟ್ಟು ಈಗಾಗಲೇ 3 ವರ್ಷಗಳವರೆಗೆ deferment ಮಾಡಿದ್ದೇವೆ. ಅದರ ಕಾಪಿಯನ್ನು ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಕಳುಹಿಸುವ ಕೆಲಸವನ್ನು ಆದಷ್ಟು ಬೇಗ ಮಾಡಿ ಉಳಿದ 60 ರೂಪಾಯಿಗಳನ್ನು ಕೊಡಿಸುವ ಕೆಲಸವನ್ನು ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಸುಭಾಷ್ ಗುತ್ತೇದಾರ್ :- ಇನ್ನೂ 60 ರೂಪಾಯಿಗಳನ್ನು ಕೊಟ್ಟಿಲ್ಲ. ಅವರು 100 ರೂಪಾಯಿ ಕೊಟ್ಟಿಲ್ಲ. ಕೇವಲ 50 ರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್ನೂ ಅವರು 110 ರೂಪಾಯಿಗಳನ್ನು ಕೊಡಬೇಕು. ಏನೋ ರೇಟ್‌ನಲ್ಲಿ ಹೆಚ್ಚಿಗೆ ಕೊಟ್ಟಿದ್ದು, declare ಮಾಡಿದ್ದು. . . .

ಶ್ರೀ ಶಿವರಾಜ್ ತಂಗಡಗಿ :- ಆಳಂದ Sugar Factory ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡುತ್ತೇನೆ. ಕೊಡಿಸುವ ಕೆಲಸವನ್ನು ಮಾಡುತ್ತೇನೆ.

ಶ್ರೀ ಸುಭಾಷ್ ಗುತ್ತೇದಾರ್:- ಈಗ season ಮುಗಿದಿದೆ. Factory ಬಂದ್ ಆಗಿದೆ. ಏಕೆ ಬಂದ್ ಆಗಿದೆ? ಅಲ್ಲಿಯ ರೈತರ ಗತಿ ಏನಾಗಿದೆ? ಎನ್ನುವ ಬಗ್ಗೆ ಏನಾದರೂ Meeting ಮಾಡಿದ್ದೀರಾ? ಅದರ ಬಗ್ಗೆ ಪೇಪರ್‌ನಲ್ಲಿ ಬಂದಿದೆ.

ಶ್ರೀ ಶಿವರಾಜ್ ತಂಗಡಗಿ :- ಆಳಂದ Sugar Factory ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡುತ್ತೇನೆ. ಚರ್ಚೆ ಮಾಡಿ ಪರಿಹಾರ ಮಾಡುತ್ತೇನೆ.

ಅಧ್ಯಕ್ಷರು :- ಇಲ್ಲಿಗೆ ಗಮನ ಸೆಳೆಯುವ ಸೂಚನೆಗಳು ಮುಕ್ತಾಯವಾಯಿತು. ಬೆಳಗ್ಗೆ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯಕ್ಕೆ ಸಂಬಂಧಿಸಿದಂತೆ ಚರ್ಚೆ ಮಾಡಬೇಕಾಗಿತ್ತು. ಅದಕ್ಕೆ ಮೊದಲು ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಂಡಿದ್ದೆವು. ಈಗ ಸಮಯ ರಾತ್ರಿ 9-35 ಗಂಟೆ ಆಗಿದೆ. ನಾನಂತೂ ರೆಡಿ ಇದ್ದೇನೆ. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ಯಾರಾದರೂ ಸದಸ್ಯರು ಮಾತನಾಡುವುದಿದ್ದರೆ ಮಾತನಾಡಬಹುದು.